ದಿನಾಂಕಃ 18-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ:</u>

ನಾನು ಮಧ್ಯಂತರ ಅರ್ಜಿ ಸಂ.4 ರ ಮೂಲಕ ಕೆಲವೊಂದು ದಾಖಲೆಗಳನ್ನು ಹಾಜರಪಡಿರಸಿರುತ್ತೇನೆ. ಅವುಗಳನ್ನು ಗುರುತಿಸುವಂತೆ ಕೋರುತ್ತಾರೆ.

| | |
|---|---|
| 1. | ಎರಡು ಹೇಳಿಕೆಗಳ ದೃಢೀಕೃತ ನಕಲುಗಳನ್ನು ಹಾಜರಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-16 ಮತ್ತು 17 ಎಂದು ಗುರುತಿಸಲಾಯಿತು. |
| 2. | ಶಾಲಾ ವರ್ಗಾವಣಾ ಪ್ರಮಾಣ ಪತ್ರದ ದೃಢೀಕೃತ ನಕಲು ಹಾಜಪರಡಿಸಿರುತ್ತೇನೆ. ಅದನ್ನು ನಿಪಿ-18 ಎಂದು ಗುರುತಿಸಲಾಯಿತು. |

ಆದ್ದರಿಂದ ನಾನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ಪರಿಹಾರವನ್ನು ಮಂಜೂರು ಮಾಡುವಂತೆ ಕೊರುತ್ತೇನೆ.

<u>ಪಾಟೀ ಸವಾಲು: ಎದುರುದಾರ ಪರ ಶ್ರೀ ಎಂಎಂಕೆ ವಕೀಲರಿಂದ:</u>

ಮೃತ ಸುಜೀತ ತಮದಡ್ಡಿ ನನ್ನ ಮಗ. ನನ್ನ ಮಗ ಮೃತಪಟ್ಟಾಗ ಆತನ ವಯಸ್ಸು 30 ವರ್ಷ ಇತ್ತು. ಆ ಬಗ್ಗೆ ದಾಖಲೆ ಹಾಜರಪಡಿಸಿರುತ್ತೇನೆ. ಅಪಘಾತದ ಸಮಯದಲ್ಲಿ ನನ್ನ ಮಗನ ವಯಸ್ಸು 40 ವರ್ಷಕ್ಕಿಂತ ಹೆಚ್ಚು ಇತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಮಗನ ವಯಸ್ಸು 30 ವರ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಆ ಸಮಯದಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದನು. ಆ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ. ನನ್ನ ಮಗ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ಮದ್ಯಪಾನ ಮಾಡಿ ತಿರುಗಾಡಿಕೊಂಡು ಇದ್ದ ಎಂದರೆ ಸರಿಯಲ್ಲ. ನನ್ನ ಮಗ ತಿಂಗಳಿಗೆ 30 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದ ಎಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ. ನನ್ನ ಮಗ ತಿಂಗಳಿಗೆ 30 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವು ದಿನಾಂಕಃ 21-10-2022 ರಂದು ಬೆಳಿಗ್ಗೆ 05-00 ಗಂಟೆ ಸುಮಾರಿಗೆ ಕಬ್ಬಿನ ಟ್ರ್ಯಾಕ್ಟರನಿಂದ ತೇರದಾಳದ ದಾನಿಗೊಂಡ ಆಸ್ಪತ್ರೆಯ ಹತ್ತಿರ ಆಗಿರುತ್ತದೆ. ಆ ದಿನ ಅಪಘಾತಪಡಿಸಿದ ಟ್ರ್ಯಾಕ್ಟರ ರಬಕವಿಯಿಂದ ತೇರದಾಳ ಕಡೆಗೆ ಹೋಗುತ್ತಿತ್ತು. ಆ ಸಮಯದಲ್ಲಿ ನನ್ನ ಮಗ

ನಡೆದುಕೊಂಡು ರಸ್ತೆ ದಾಟುತ್ತಿದ್ದನು. ಅಪಘಾತದ ಸಮಯದಲ್ಲಿ ಟ್ರ್ಯಾಕ್ಟರ ಚಾಲಕ ರಸ್ತೆಯ ಅಡಗಡೆ ಚಲಾಯಿಸಿಕೊಂಡು ಹೋಗುತ್ತಿದ್ದ ಎಂದರೆ ಸರಿ. ಆ ದಿನ ನನ್ನ ಮಗ ಮದ್ಯಪಾನ ಮಾಡಿಕೊಂಡು ಹೋಗುತ್ತಿರುವಾಗ ತನ್ನ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ, ಅಪಘಾತವು ಟ್ಯಾಕ್ಟರ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತದ ನಂತರ ದೂರನ್ನು ನನ್ನ ಮಗ ಶಿವು ತಮದಡ್ಡಿ ಇವರು ಕೊಟ್ಟಿರುತ್ತಾರೆ. ದೂರಿನಲ್ಲಿ ಟ್ರ್ಯಾಕ್ಟರ ನಂಬರ ಮತ್ತು ಚಾಲಕನ ಹೆಸರು ಬರೆದಿಲ್ಲ, ಯಾವುದೋ ವಾಹನ ಡಿಕ್ಕಿಪಡಿಸಿಕೊಂಡು ಹೋಗುತ್ತದೆ ಎಂದು ಹೇಳಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋದಾಗ ಅಪಘಾತಪಡಿಸಿದೆ ಎಂದು ಹೇಳಿದ ವಾಹನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಅಪಘಾತಪಡಿಸಿದ ವಾಹನ ಯಾವ ಕಂಪನಿಯದ್ದು ಮತ್ತು ಯಾವ ಬಣ್ಣದು ಎಂದು ನನಗೆ ಗೊತ್ತಿಲ್ಲ. ಆದರೆ ಪೋಲಿಸರು ತೋರಿಸಿದ ಮೇರೆಗೆ ಗೊತ್ತಾಗಿರುತ್ತದೆ.

1 ನೇ ಎದುರುದಾರ ನಮಗೆ ಪರಿಚಯ ಇಲ್ಲ. ಸದರಿಯವರು ಹನಗಂಡಿ ಗ್ರಾಮದವರು. ಅಪಘಾತವನ್ನು ಯಾವುದೋ ವಾಹನ ಮಾಡಿಕೊಂಡು ಹೋಗಿರುತ್ತದೆ, 1 ನೇ ಎದುರುದಾರ ನಮಗೆ ಪರಿಚಯದ ವ್ಯಕ್ತಿ ಇರುವುದರಿಂದ ಟ್ಯಾಕ್ಟರ ನಂ.ಕೆಎ-48/ಟಿಬಿ-4755 ಮತ್ತು ಟ್ರೇಲರ ನಂ.ಕೆಎ-48/ಟಿಬಿ 4756 ಮತುತ 4757 ನೇದ್ದರ ವಾಹನಗಳನ್ನು ಪರಿಹಾರ ಪಡೆಯುವ ಸಲುವಾಗಿ ಸೇರಿಸಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

2 ಮತ್ತು 3 ನೇ ಅರ್ಜಿದಾರರ ಮದುವೆಯಾಗಿದ್ದು, ಬೇರೆ ಬೇರೆ ವಾಸ ಇರುತ್ತಾರೆ ಎಂದರೆ ಸರಿ. ಮೃತ ಸುಜೀತನಿಗೆ ಮದುವೆಯಾಗಿರಲಿಲ್ಲ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ, ಮೃತ ನನ್ನ ಮಗ ದುಡಿದು ನನ್ನನ್ನು ಸಾಕುತ್ತಿದ್ದನು. ಮೃತನ ಸಂಪಾದನೆಯ ಮೇಲೆ 2 ಮತ್ತು 3 ನೇ ಅರ್ಜಿದಾರರು ಅವಲಂಬನೆ ಇರಲಿಲ್ಲ ಎಂದರೆ ಸರಿಯಲ್ಲ. ಮೃತನ ಸಂಪಾದನೆಯ ಮೇಲೆ, 2 ಮತ್ತು 3 ನೇ ಅರ್ಜಿದಾರರು ಉಪ ಜೀವನ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಟ್ಯಾಕ್ಟರ ಟ್ರೇಲರನಿಂದ ಆಗಿರುತ್ತದೆ. ಅಪಘಾತಕ್ಕೆ ಮತ್ತು ಟ್ರ್ಯಾಕ್ಟರ ಟ್ರೇಲರಗೆ ಯಾವುದೇ ಸಂಬಂಧ ಇಲ್ಲ, ಆದರೂ ಪರಿಹಾರ ಪಡೆಯುವ ಸಲುವಾಗಿ ತಡವಾಗಿ ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತಪಡಿಸಿದೆ ಎಂದು ಹೇಳಿದ ಟ್ರ್ಯಾಕ್ಟರಗೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು

ಅರ್ಜಿಯಲ್ಲಿ ಕೋರಿದ ಪರಿಹಾರ 1 ನೇ ಎದುರುದಾರ ಕೊಡಬೇಕಾಗುತ್ತದೆ, ವಿಮೆ ಕಂಪನಿ ಕೊಡಲು ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA
Date: 2025.06.18 17:48:16
+0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ